ನಾವು ಈ ವಿಚಾರವನ್ನು ತಿಳಿಸಿದ್ದೇವೆ. ಆದರೂ ಈ ಬಗ್ಗೆ, ಹೊಸ ಕಾಲೋನಿಗಳಿಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ ಗ್ರಾಮಪಂಚಾಯಿತಿಯವರು ಬಾಕಿಯನ್ನು ಕಟ್ಟಿದ ತಕ್ಷಣವೇ ವಿದ್ಯುಚ್ಛಕ್ತಿ ಮಂಡಳಿಯವರು ಕ್ರಮ ತೆಗೆದುಕೊಳ್ಳುತ್ತಾರೆ.

ವಿಷಯ:- ಲಿಂಗಸಗೂರು ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

344 (2199) **ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸಗೂರು):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನಲ್ಲಿ 50 ಹಾಸಿಗೆವುಳ್ಳ ಆಸ್ಪತ್ರೆಯನ್ನು ಜರ್ಮನ್ ಸರ್ಕಾರದ ನೆರವಿನಿಂದ ನೂರು ಹಾಸಿಗೆವುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಂದಿದೆ.

ಆ) ಜರ್ಮನ್ ಯೋಜನೆಯಲ್ಲಿ ಲಿಂಗಸಗೂರು ಆಸ್ಪತ್ರೆಯನ್ನು 50 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಹೆಚ್ಚಿಸಲಾಗುವುದು.

ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಜರ್ಮನ್ ಯೋಜನೆಯಲ್ಲಿ ಲಿಂಗಸಗೂರು ಆಸ್ಪತ್ರೆಯನ್ನು 50 ಹಾಸಿಗೆಗಳಿಂದ 100 ಹಾಸಿಗೆಗೆ ಹೆಚ್ಚಿಸಲಾಗುವುದೆಂದು ಹೇಳಿದ್ದಾರೆ. ಈಗಾಗಲೇ ಈ ಸರ್ಕಾರ ಮಂಜೂರು ಮಾಡಿದೆಯೇ ಅಥವಾ ಯಾವ ವರ್ಷದಲ್ಲಿ ಮಂಜೂರಾಗಿದೆ ಎನ್ನುವುದರ ಬಗ್ಗೆ ಮಂತ್ರಿಗಳು ಸ್ವಲ್ಪ ತಿಳಿಸಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಜರ್ಮನ್ ಸಹಾಯದೊಡನೆ ಅದನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಂಡಿದ್ದೇವೆ. ಆ ಒಂದು ಯೋಜನೆ ರಾಜ್ಯಕ್ಕೆ ಮಂಜೂರಾಗಿರುವುದರಿಂದ ಯಾವ ವರ್ಷ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ ಹಾಗೂ ಕಟ್ಟಡ ದುರಸ್ತಿಗೂ ಕೂಡ ಕ್ರಮವನ್ನು ಕೈಗೊಂಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಆಮರೇಗೌಡ ಲಿಂಗನಗೌಡ ಪಾಟೀಲ್:- ಮೇಲ್ದರ್ಜೆಗೆ ಏರಿಸತಕ್ಕಂಥ ಅವಶ್ಯಕತೆ ಇಲ್ಲ, ಈಗ ಅಲ್ಲ 50 ಹಾಸಿಗೆಯಿಂದ 100 ಹಾಸಿಗೆಗಳಿಗೆ ಏರಿಸಿದರೆ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ಇವರಿಗೆ ಜಾಗವಿಲ್ಲ. ಆದುದರಿಂದ ಅದನ್ನು ಸ್ಥಳಾಂತರಿಸಿ ಬೇರೆ ಕಡೆ ಕಟ್ಟುವುದಕ್ಕೆ ಸರ್ಕಾರ ಯೋಚಿಸಿದೆಯೇ ಎನ್ನುವುದರ ಬಗ್ಗೆ ಮತ್ತು ಇದನ್ನು 100 ಹಾಸಿಗೆಗಳಿಗೆ ಏರಿಸಿದ ನಂತರ ಕಟ್ಟಡ ಕಟ್ಟುವ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ಎನ್ನುವುದರ ಬಗ್ಗೆಯೂ ಕೂಡ ಸ್ವಲ್ಪ ಮಾಹಿತಿಯನ್ನು ಒದಗಿಸಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ವಿವರವಾದಂಥ ಮಾಹಿತಿಯನ್ನು ತರಿಸಿಕೊಂಡು, ಅಲ್ಲೇ ಇರಬೇಕೇ ಅಥವಾ ಬೇರೆ ಕಡೆಗೆ ಸ್ಥಳಾಂತರಿಸಬೇಕೇ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮಕೈಗೊಳ್ಳುತ್ತೇನೆ.

ಅಧ್ಯಕ್ಷರು:- ಮಲ್ಲಿಕಾರ್ಜುನ ಖರ್ಗೆಯವರೇ, ತಮ್ಮ 2201 ಪ್ರಶ್ನೆಗೆ ಸರ್ಕಾರದವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದಕ್ಕೆ ಸಮಯದ ಅವಶ್ಯಕತೆ ಇಲ್ಲ; ಏಕೆಂದರೆ, ಇದು ಬಹಳ ಸರಳವಾದಂಥ ಪ್ರಶ್ನೆ. ಯಾದಗಿರಿ ಮತ್ತು ಗುಲ್ಬರ್ಗಾ ಜಿಲ್ಲಾ ಪರಿಷತ್‌ನ ಇಂಜನಿಯರಿಂಗ್ ವಿಭಾಗಗಳು ಅನವಶ್ಯಕ ವಸ್ತುಗಳನ್ನು ಖರೀದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆಮೇಲೆ, ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ಎನ್ನುವುದೊಂದನ್ನೇ ನಾನು ಕೇಳಿದ್ದೇನೆ. ಇದಕ್ಕಿಂತ ಮುಂಚೆಯೇ ಸುಮಾರು ಒಂದು ತಿಂಗಳು ಇರಬಹುದು ಅಥವಾ ಇಪ್ಪತ್ತು ದಿವಸಗಳಿರಬಹುದು ನಾನು ಒಂದು ಪತ್ರವನ್ನೂ ಕೂಡ ಸಂಬಂಧಪಟ್ಟಂಥ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಬರೆದಿದ್ದೇನೆ. ಅದು ಏನೆಂದರೆ, ಇಂತಹ ಕಡೆ ಬಹಳಷ್ಟು ಅವ್ಯವಹಾರ ನಡೆದಿದೆ, ತಾವು ಇದನ್ನು ತನಿಖೆ ಮಾಡಿ ತಾವು ಲೋಕಾಯುಕ್ತಕ್ಕೆ ಒಪ್ಪಿಸಿ ಎನ್ನುವುದನ್ನು ಕೂಡ ಹೇಳಿದ್ದೇನೆ. ಇದಕ್ಕೆ ಸಾಕಷ್ಟು ಸಮಯ ಸಿಕ್ಕಿದೆ, ಏತಕ್ಕೆ ಸಮಯ ತೆಗೆದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಅವರ ಪತ್ರದ ಮೇಲೆ ನಾನು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇನೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅದರ ಬಗ್ಗೆ ವಿಚಾರಣೆ ಮಾಡಿ ವರದಿಯನ್ನು ಕಳುಹಿಸಿಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರು ಕಳುಹಿಸಿಕೊಟ್ಟಿರುವ ವರದಿ ಅಸಮರ್ಪಕವಾಗಿದೆ ಆದುದರಿಂದ ಒಂದು ಮೂರ್ನಾಲ್ಕು ದಿವಸಗಳ ಸಮಯ ಸಿಕ್ಕರೆ ವಿವರವಾಗಿರತಕ್ಕಂಥ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ವಿಷಯ:- ಪದವಿಪೂರ್ವ ಕಾಲೇಜುಗಳಲ್ಲಿ ವೃತ್ತಿಪರ ಶಿಕ್ಷಣ ಪಡೆದವರ ನೇಮಕ.

335 (2242) **ಡಾ।। ಎಂ.ಪಿ. ಕರ್ಕಿ (ಕುಮಟಾ):-** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿ.ಯು.ಸಿ.ಯಲ್ಲಿ ವೃತ್ತಿಪರ ಶಿಕ್ಷಣ ಪಡೆದ ಶಿಕ್ಷಕರನ್ನು ಶಿಕ್ಷಕರ ಹುದ್ದೆಗೆ ನೇಮಿಸಲು ಸರ್ಕಾರ ಕ್ರಮಕೈಗೊಳ್ಳಲಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ,